# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 578 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಪಿ.ಹೆಚ್.ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : | 20-02-2023 |
| **ಉತ್ತರಿಸುವ ಸಚಿವರು** | : | ಪ್ರವಾಸೋದ್ಯಮ, ಜೀವಿಶಾಸ್ತ್ರ,<br>ಹಾಗೂ ಪರಿಸರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಐಹೊಳೆ ಗ್ರಾಮವು ಐತಿಹಾಸಿಕ ತಾಣವಾಗಿದ್ದು, ಇಲ್ಲಿ ಸಾವಿರಾರು ದೇವಸ್ಥಾನಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಶತಮಾನಗಳಿಂದಲೂ ಈ ಸ್ಥಳದಲ್ಲಿ ವಾಸವಿದ್ದ ಅನೇಕ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಿ ಬೇರೆಡೆಗೆ ಸ್ಥಳಾಂತರಿಸಿರುವುದು ನಿಜವೇ; ಸದರಿ ಸ್ಥಳವನ್ನು ವಿಶ್ವದ ಪ್ರವಾಸಿಗರಿಗೆ ಮುಕ್ತ ಮಾಡುವ ತೀರ್ಮಾನ ಮಾಡಿರುವುದು ನಿಜವೇ; ಹಾಗಿದ್ದಲ್ಲಿ ಕಾರ್ಯಗತಗೊಳಿಸಲು ಸಮಯ ನಿಗಧಿ ಪಡಿಸಿದೆಯೇ; ಹೌದಾದಲ್ಲಿ ಯಾವಾಗ ಕಾರ್ಯಗತಗೊಳಿಸಲಾಗುವುದು; | ಐಹೊಳೆ ಗ್ರಾಮವು ಐತಿಹಾಸಿಕ ಮತ್ತು ಜಗತ್ಪ್ರಸಿದ್ಧ ವಿಶ್ವ ಪರಂಪರೆ ಸ್ಮಾರಕಗಳು, ದೇವಾಲಯಗಳು ಹಾಗೂ ಅಪೂರ್ವ ಶಿಲ್ಪಕಲೆ ಹೊಂದಿರುವ ಪುರಾತನ ಗ್ರಾಮವಾಗಿದ್ದು, ಸ್ಮಾರಕಗಳ ಸಂಪೂರ್ಣ ಸಂರಕ್ಷಣೆ ಮಾಡುವ ಉದ್ದೇಶದಿಂದ ಐಹೊಳೆ ಐತಿಹಾಸಿಕ ಸ್ಮಾರಕಗಳ ಸುತ್ತಲೂ ಇರುವ ಕಟ್ಟಡಗಳನ್ನು ಸಂಪೂರ್ಣವಾಗಿ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ರೂ.5041.00 ಲಕ್ಷಗಳ ಪುನರ್ವಸತಿ ಪ್ಯಾಕೇಜನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ/49/ಆರ್‌ಇಹೆಚ್/2012, ದಿನಾಂಕ:31-08-2012 ರಲ್ಲಿ ಮಂಜೂರಾತಿ ನೀಡಿದೆ.<br><br>ಈ ಮಧ್ಯೆ, ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿ:09-08-2018 ರಂದು ನಡೆದ ಸಭೆಯಲ್ಲಿ ಐಹೊಳೆ ಗ್ರಾಮವನ್ನು ಸ್ಥಳಾಂತರ ಮಾಡುವ ಕುರಿತು ಗ್ರಾಮ ಪಂಚಾಯತಿಯೊಂದಿಗೆ ಚರ್ಚಿಸಿ, ಗ್ರಾಮಸ್ಥರ ಅಭಿಪ್ರಾಯದೊಂದಿಗೆ ಭೂಸ್ವಾಧೀನತೆ ಮತ್ತು ಪುನರ್ವಸತಿ ಕುರಿತು ಪ್ರಸ್ತಾವನೆಯನ್ನು Archaeological Survey of India, New Delhi ಇವರಿಗೆ ಸಲ್ಲಿಸಲು ಸೂಚಿಸಿದ ಪ್ರಕಾರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬಾಗಲಕೋಟೆ ಇವರು ಗ್ರಾಮ ಪಂಚಾಯತಿ ಹಾಗೂ ಗ್ರಾಮಸ್ಥರ ಅಭಿಪ್ರಾಯ ಪಡೆದು, ಐಹೊಳೆ ಗ್ರಾಮವನ್ನು ಸಂಪೂರ್ಣ ಸ್ಥಳಾಂತರ ಮಾಡಲು ತಗಲುವ ಅಂದಾಜು ವೆಚ್ಚದ ಪ್ರಾಥಮಿಕ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. |
| ಇ) | ಐಹೊಳೆಯಲ್ಲಿ ವಾಸವಾಗಿರುವ ಕುಟುಂಬ ಗಳನ್ನು ಸ್ಥಳಾಂತರಿಸಲು ಸರ್ಕಾರ ಬದ್ಧವಿದೆಯೇ? (ವಿವರ ನೀಡುವುದು) | |

| | | |
|---|---|---|
| | | ಮುಂದುವರೆದು, ಅಂದಿನ ಮಾನ್ಯ ಪ್ರವಾಸೋದ್ಯಮ ಸಚಿವರು ಜಿಲ್ಲೆಗೆ ಭೇಟಿ ನೀಡಿ, ಸಭೆ ಜರುಗಿಸಿ ಸಂಬಂಧಿಸಿದ ಐಹೊಳೆ ಗ್ರಾಮದ ಸ್ಥಳಾಂತರದ ಕುರಿತು ಪುನಃ ಪರಿಶೀಲಿಸಿ ಪುನರ್ವಸತಿಗಾಗಿ ಜಮೀನನ್ನು ಗುರುತಿಸಿ, ಪರಿಷ್ಕೃತ ಮೌಲ್ಯಮಾಪನ ವರದಿ ಸಲ್ಲಿಸಲು ಸೂಚಿಸಿದ್ದ ಮೇರೆಗೆ ಪ್ರಸ್ತುತ ಜಿಲ್ಲಾಧಿಕಾರಿಯವರ ಹಂತದಲ್ಲಿ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ.<br><br>ಜಿಲ್ಲಾಧಿಕಾರಿಗಳಿಂದ ಪರಿಷ್ಕೃತ ಮೌಲ್ಯಮಾಪನ ವರದಿಯು ಸ್ವೀಕೃತವಾದ ನಂತರ ಪರಿಶೀಲಿಸಿ ಕ್ರಮ ವಹಿಸಲಾಗುವುದು. |

**TOR 46 TDV 2023**

**(ಆನಂದ್ ಸಿಂಗ್)**
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಹಾಗೂ ಪರಿಸರ ಸಚಿವರು